**ಪಾಠ–6** **ಮೇ 1–7**

# ಅಬ್ರಹಾಮನ ಸಂತಾನ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಯೆಹೆ 16:8, ಧ.ಕಾಂಡ 28:1,15, ಯೆರೆ 11:8, ಆ.ಕಾಂಡ 6:5, ಯೋಹಾನ 10:27,28, ಗಲಾತ್ಯ 3:26–29, ರೋಮನ್ 4:16,17.

**ಸ್ಮರಣವಾಕ್ಯ : "ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ, ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ"** (1 ಪೇತ್ರ 2:9).

ಒಂದು ಸಣ್ಣ ಪಟ್ಟಣದಲ್ಲಿ ಆಭರಣ ಮಾಡುವವರ ಕಿಟಕಿಯಲ್ಲಿದ್ದ ಗಡಿಯಾರವು ಒಂದು ದಿನ ಎಂಟು ಮುಕ್ಕಾಲು ಗಂಟೆಗೆ ನಿಂತು ಹೋಯಿತು. ಪಟ್ಟಣದಲ್ಲಿದ್ದ ಅನೇಕ ನಾಗರೀಕರು ಸಮಯವನ್ನು ಅರಿಯಲು ಈ ಗಡಿಯಾರದ ಮೇಲೆ ಆತುಕೊಂಡಿದ್ದರು. ಆ ಒಂದು ಬೆಳಗಿನ ಜಾವ ವ್ಯಾಪಾರಿಗಳು ಗಡಿಯಾರವಿದ್ದ ಕಿಟಕಿಯ ಕಡೆಗೆ ನೋಡಿದಾಗ ಸಮಯವು ಎಂಟು ಗಂಟೆ ನಲವತ್ತೈದು ನಿಮಿಷಗಳು ಆಗಿರುವುದನ್ನು ಕಂಡರು. ಶಾಲೆಗೆ ಹೋಗುವ ಮಕ್ಕಳು ಆ ಗಡಿಯಾರವನ್ನು ನೋಡಿ ಆಶ್ಚರ್ಯಪಟ್ಟು ತಮಗೆ ಇನ್ನೂ ಹೆಚ್ಚಿನ ಸಮಯವಿದೆ

---

* **ಮೇ 8ನೇ ಸಬ್ಬತ್ತಿನ ಸಿದ್ಧತೆಗಾಗಿ ಈ ವಾರದ ಪಾಠ ಅಧ್ಯಯನ ಮಾಡಿರಿ.**

ಎಂದು ತಿಳಿದುಕೊಂಡು ಅಡ್ಡಾಡತೊಡಗಿದರು. ಆ ಸಣ್ಣ ಗಡಿಯಾರದ ದೆಸೆಯಿಂದ ಅನೇಕ ವ್ಯಾಪಾರಿಗಳು ಆ ಮುಂಜಾನೆ ಸರಿಯಾದ ಸಮಯವನ್ನು ಪಾಲನೆ ಮಾಡಲಾಗದೆ ತಡಮಾಡಿಕೊಂಡರು"– ಸಿ.ಎಲ್. ಪೆಡಾಕ್, ಗಾಡ್ಸ್ ಮಿನಿಟ್ಸ್, ಪುಟ 244.

ಪುರಾತನ ಇಸ್ರಾಯೇಲ್ಯರ ವಿಫಲತೆಯನ್ನು ಎಷ್ಟು ನಿಖರವಾಗಿ ಇದು ಪ್ರತಿಬಿಂಬಿಸುತ್ತದೆ ಅಲ್ಲವೇ? ದೇವರು ಇಸ್ರಾಯೇಲ್ಯರನ್ನು ಎಲ್ಲಾ ಜನಾಂಗಗಳಿಗೂ ಉದಾಹರಣೆಯಾಗಿ ಇಟ್ಟಿದ್ದನು (ಎಹೆ 5:5). ಅದು ಮೂರು ಖಂಡಗಳನ್ನು ಸೇರಿಸುವ ಕಾರ್ಯತಂತ್ರದ ನೆಲವಾಗಿತ್ತು (ಆಫ್ರಿಕಾ, ಯುರೋಪ್ ಮತ್ತು ಏಷ್ಯಾ) ಇಸ್ರಾಯೇಲ್ಯರು ಈ ಲೋಕದ ಆಧ್ಯಾತ್ಮಿಕ ಗಡಿಯಾರದಂತೆ ಇರಬೇಕಾಗಿತ್ತು. ಆಭರಣಕಾರನ ಕಿಟಕಿಯಲ್ಲಿದ್ದ ಗಡಿಯಾರವು ನಿಂತುಹೋದಂತೆ ಇಸ್ರಾಯೇಲ್ಯರು ನಿಂತುಹೋದರು (ತಪ್ಪಿಹೋದರು). ಆದಾಗ್ಯೂ ಅದು ಸಂಪೂರ್ಣವಾದ ವಿಫಲತೆಯಲ್ಲ ಯಾಕೆಂದರೆ ದೇವರು ಇಂದಿಗೂ ಸಹ ನಂಬಿಗಸ್ತರಾಗಿ ಉಳಿದುಕೊಂಡಿರುವವರನ್ನು ಹೊಂದಿದ್ದಾನೆ. ಈ ವಾರ ನಮ್ಮ ಅಧ್ಯಯನವು ನಮ್ಮನ್ನೂ ಸೇರಿಸಿಕೊಂಡು ಎಲ್ಲಾ ಕಾಲದಲ್ಲಿದ್ದ ನಿಜವಾದ ಇಸ್ರಾಯೇಲ್ಯರ ಪಾತ್ರ ಮತ್ತು ಗುರುತಿನ ಬಗ್ಗೆ ದೃಷ್ಟಿ ಹರಿಸುತ್ತದೆ.

**ಈ ವಾರದ ಪಕ್ಷಿನೋಟ** : ದೇವರು ಇಸ್ರಾಯೇಲ್ಯರೊಂದಿಗೆ ಯಾವ ಒಡಂಬಡಿಕೆ ವಾಗ್ದಾನಗಳನ್ನು ಮಾಡಿಕೊಂಡನು? ಅದರೊಂದಿಗೆ ಯಾವ ನಿಬಂಧನೆಗಳು ಸೇರಿದ್ದವು? ಆ ವಾಗ್ದಾನಗಳಿಗೆ ಇಸ್ರಾಯೇಲ್ಯರು ಹೇಗೆ ವಿಧೇಯರಾಗಿದ್ದರು? ಅವರು ಅವಿಧೇಯರಾದಾಗ ಏನಾಯಿತು?

**ಭಾನುವಾರ** **ಮೇ 2**

## ಸಮಸ್ತ ಜನಾಂಗಗಳಲ್ಲಿ ನಿಮ್ಮನ್ನೇ... ಆಯ್ದುಕೊಂಡನು

"ಯಾಕೆಂದರೆ ನೀವು ನಿಮ್ಮ ದೇವರಾದ ಯೆಹೋವನಿಗೆ ಮೀಸಲಾದ ಜನರಾಗಿದ್ದೀರಲ್ಲವೇ; ಆತನು ಭೂಲೋಕದಲ್ಲಿರುವ ಸಮಸ್ತ ಜನಾಂಗಗಳಲ್ಲಿ ನಿಮ್ಮನ್ನೇ ಸ್ವಕೀಯ ಜನವಾಗುವುದಕ್ಕೆ ಆಯ್ದುಕೊಂಡನು" (ಧ.ಕಾಂಡ 7:6).

ದೇವರು ನಿರ್ದಿಷ್ಟವಾಗಿ ಯೆಹೂದ್ಯರನ್ನು ಭೂಮಿಯ ಮೇಲೆ ಎಲ್ಲಾ

ಜನಾಂಗಗಳಿಗೂ ತನ್ನನ್ನು ಪ್ರತಿನಿಧಿಸುವ ವಿಶೇಷವಾದ ಜನಾಂಗವಾಗಿ ಆರಿಸಿಕೊಂಡನು. ಇದರ ಬಗ್ಗೆ ಯಾವ ಸಂದೇಹವೂ (ಪ್ರಶ್ನೆಯೇ) ಇಲ್ಲ. ಮೇಲಿನ ವಚನದಲ್ಲಿ ಸ್ವಕೀಯ ಎಂಬುದಾಗಿ ಅನುವಾದಗೊಂಡಿರುವ ಮೂಲಪದ 'ಸೆಗುಲ್ಲಾಹ್' ಇದು ಮೌಲ್ಯಭರಿತ ಆಸ್ತಿ ಅಥವಾ ನಿಕ್ಷೇಪ ಎಂದು ಅರ್ಥಕೊಡುತ್ತದೆ. ಇದರಲ್ಲಿ ನಾವು ಬಹಳ ಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕಾದ ಅಂಶ ಯಾವುದೆಂದರೆ ದೇವರ ಈ ಆಯ್ಕೆಯು ಸಂಪೂರ್ಣವಾಗಿ ಆತನ ಕೃಪೆಯನ್ನು ವ್ಯಕ್ತಪಡಿಸುತ್ತದೆ. ಈ ಕೃಪೆಯನ್ನು ಹೊಂದಿಕೊಳ್ಳುವುದಕ್ಕೆ ಅವರಲ್ಲಿ ಯಾವುದೇ ವಿಶೇಷವಾದ ಅರ್ಹತೆಯಿರಲಿಲ್ಲ. ಹಾಗೆ ಅರ್ಹತೆ ಇರಲು ಸಾಧ್ಯವೂ ಇಲ್ಲ. ಯಾಕೆಂದರೆ ಕೃಪೆ ಎನ್ನುವುದು ಅರ್ಹತೆ ಇಲ್ಲದವರಿಗೆ ಮಾಡುವ ಅನುಗ್ರಹವಾಗಿದೆ.

ಯೆಹೆ 16:8ನ್ನು ಓದಿರಿ. ದೇವರು ಇಸ್ರಾಯೇಲನ್ನು ಆರಿಸಿಕೊಂಡದ್ದು ಯಾಕೆಂದು ವಿವರಿಸಲು ಹೇಗೆ ಸಹಾಯಮಾಡುತ್ತದೆ?

"ಇಸ್ರಾಯೇಲು ಯಾಕೆ ಯಾಹುವಿನಿಂದ ಆರಿಸಿಕೊಳ್ಳಲ್ಪಟ್ಟಿತು? ಅದು ತಿಳಿಯಲಾರದ ಸಂಗತಿಯಾಗಿದೆ. ಯಾವುದೇ ದೊಡ್ಡ ಸಂಸ್ಕೃತಿ ಅಥವಾ ಪ್ರತಿಷ್ಠೆ ಇಲ್ಲದ ಸಣ್ಣಗುಂಪನ್ನು ಹೊಂದಿದ್ದ ಜನಾಂಗವಾಗಿತ್ತು. ಅಂತಹ ಹೇಳಿಕೊಳ್ಳುವ ಯಾವುದೇ ವಿಶೇಷವಾದ ವೈಯಕ್ತಿಕ ಅರ್ಹತೆಗಳನ್ನು ಇಸ್ರಾಯೇಲು ಹೊಂದಿರಲಿಲ್ಲ. ಆಯ್ಕೆಯು ಕೇವಲ ದೇವರು ನಡೆಸಿದ ಕ್ರಿಯೆಯಾಗಿತ್ತು... ಆ ಆಯ್ಕೆಗೆ ಅಂತಿಮವಾದ ಕಾರಣ ದೇವರ ಪ್ರೀತಿಯ ತಳದಲ್ಲಿ ನಿಗೂಢವಾಗಿ ಇಡಲ್ಪಟ್ಟಿದೆ. ದೇವರು ಅವರ ಪಿತೃಗಳಿಗೆ ಮಾಡಿದ್ದ ವಾಗ್ದಾನವನ್ನು ಗೌರವಿಸುವ ಸಲುವಾಗಿ ಆತನನ್ನು ಇಸ್ರಾಯೇಲ್ಯರನ್ನು ಪ್ರೀತಿಸಿ ಅವರನ್ನು ಆರಿಸಿಕೊಂಡನು. ಇಸ್ರಾಯೇಲ್ ಮೇಲೆ ದೇವರು ತೋರಿದ ಪ್ರೀತಿಯ ನಿಮಿತ್ತ ಆತನು ಆ ಜನಾಂಗವನ್ನು ಆಯ್ದುಕೊಂಡನು. ದೇವರು ತನ್ನ ಭುಜಬಲ ಪರಾಕ್ರಮದಿಂದ ಐಗುಪ್ತ ದೇಶದಲ್ಲಿ ದಾಸತ್ವದಲ್ಲಿದ್ದ ಇಸ್ರಾಯೇಲ್ಯರನ್ನು ಬಿಡುಗಡೆ ಮಾಡಿಕೊಂಡು ಅಲ್ಲಿಂದ ಕರೆದುಕೊಂಡು ಬಂದನು. ಇಸ್ರಾಯೇಲು ಒಮ್ಮೆ ಈ ಸಂಗತಿಯನ್ನು ಗ್ರಹಿಸಿಕೊಂಡು ತಾನು ನಿಜವಾಗಿಯೂ ಪವಿತ್ರವಾದ ವಿಶೇಷವಾದ ಜನಾಂಗ ಎಂಬುದನ್ನು ಅರಿತುಕೊಳ್ಳಲಿ. ಅಂತಹ ಉನ್ನತವಾದ

(ಶ್ರೇಷ್ಠವಾದ) ಮಟ್ಟವನ್ನು ತ್ಯಜಿಸುವ ಪ್ರವೃತ್ತಿಯನ್ನು ಹೊಂದಿರುವುದು ಅತ್ಯಂತ ಆಕ್ಷೇಪಾರ್ಹವಾದುದಾಗಿದೆ"– ಜೆ.ಎ. ಥಾಮ್ಸನ್ ಧರ್ಮೋಪದೇಶಕಾಂಡ ಪುಟ 130, 131.

ದೇವರ ಯೋಜನೆಯ ಪ್ರಕಾರ ಇಸ್ರಾಯೇಲ್ಯರು ರಾಜವಂಶೀಯರು ಯಾಜಕ ಜನಾಂಗವೂ ಆಗಿದೆ. ದುಷ್ಟತನ ತುಂಬಿದ ಈ ಲೋಕದಲ್ಲಿ ಅವರು ರಾಜರುಗಳಾಗಿ ನೀತಿವಂತರಾಗಿ ಮತ್ತು ಆತ್ಮೀಕರಾಗಿ ಪಾಪದ ಸಾಮ್ರಾಜ್ಯದ ಮೇಲೆ ಜಯಹೊಂದಿದವರಾಗಿರಬೇಕಾಗಿತ್ತು. ಯಾಜಕರಾಗಿ ಅವರು ದೇವರ ಸಾನಿಧ್ಯದಲ್ಲಿ ಪ್ರಾರ್ಥನೆ ಸಲ್ಲಿಸುತ್ತಾ ಸ್ತುತಿ, ಯಜ್ಞಗಳನ್ನು ಅರ್ಪಿಸುವವರಾಗಬೇಕಾಗಿತ್ತು. ದೇವರಿಗೂ ಅನ್ಯಜನಾಂಗಗಳಿಗೂ ಮಧ್ಯಸ್ಥರಾಗಿ ಅವರು ಪ್ರಬೋಧನೆ ಮಾಡುವವರಾಗಿ, ಉಪದೇಶಕರಾಗಿ ಪ್ರವಾದಿಗಳಾಗಿ ಪರಿಶುದ್ಧ ಜೀವನಕ್ಕೆ ಉದಾಹರಣೆಯಾಗಿ ಸತ್ಯವಾದ ಧರ್ಮದ ಪ್ರತಿಪಾದಕರಾಗಿರಬೇಕಾಗಿತ್ತು.

ಇಂದಿನ ವಚನದಲ್ಲಿರುವ ಪದವೃಂದವನ್ನು ನೋಡಿರಿ. ಇದರಲ್ಲಿ ದೇವರು ಅವರನ್ನು ಕುರಿತು "ಭೂಲೋಕದಲ್ಲಿರುವ ಸಮಸ್ತ ಜನಾಂಗಗಳಲ್ಲಿ" ನಿಮ್ಮನ್ನೇ... ಆಯ್ದುಕೊಂಡೆನು ಎಂಬುದಾಗಿ ಹೇಳುತ್ತಾನೆ. ದೀನತೆಯೆಂಬ ಶ್ರೇಷ್ಠಗುಣದ ಬಗ್ಗೆ ಮತ್ತು ಗರ್ವದಲ್ಲಿರುವ ಅಪಾಯ ಬಗ್ಗೆ ಇರುವ ಎಲ್ಲಾ ವಚನಗಳನ್ನು ಪರಿಗಣಿಸುವವರಾಗಿ ಈ ವಚನವು ಏನು ಹೇಳುತ್ತದೆಯೆಂದು ಆಲೋಚಿಸುವಿರಿ? ಯಾವ ರೀತಿಯಾಗಿ ಅವರು ಸಮಸ್ತ ಜನಾಂಗಗಳಿಗಿಂತ ಮೇಲಾಗಿರಬೇಕಾಗಿತ್ತು? ಒಂದು ಸಭೆಯಾಗಿ ಇದನ್ನು ನಾವು ನಮಗೆ ಅನ್ವಯ ಮಾಡಿಕೊಳ್ಳಬಹುದೆ? ಹಾಗಾದರೆ, ಅದು ಹೇಗೆ?

**ಸೋಮವಾರ** **ಮೇ 3**

## ಭೂವ್ಯವಹಾರ (ಆ.ಕಾಂಡ 35:12)

ದೇವರು ಇಸ್ರಾಯೇಲ್ಯರಿಗೆ ಭೂಪ್ರದೇಶವನ್ನು ಕೊಡುತ್ತೇನೆಂದು ಮಾಡಿದ ವಾಗ್ದಾನವನ್ನು ಮೊದಲಿಗೆ ಅಬ್ರಹಾಮನಿಗೆ ನಂತರ ಇಸಾಕ ಮತ್ತು ಯಾಕೋಬನಿಗೆ ಮಾಡಲಾಯ್ತು. ಯೋಸೇಪನು ಸಾಯುತ್ತಿರುವಾಗಲೂ ಈ ವಾಗ್ದಾನದ ಪುನರಾವರ್ತನೆಯಾಯ್ತು (ಆ.ಕಾಂಡ 50:24). ತಾನು ವಾಗ್ದಾನ

ಮಾಡಿದ ದೇಶವನ್ನು ಅಬ್ರಹಾಮನ ಸಂತತಿಯು ವಶಪಡಿಸಿಕೊಳ್ಳುವ ಮೊದಲು ನಾನೂರು ವರ್ಷಗಳು ಕಳೆಯಬೇಕೆಂದು ದೇವರು ತಿಳಿಸಿದ್ದನು (ಆ.ಕಾಂಡ 15:13,16). ಈ ವಾಗ್ದಾನದ ನೆರವೇರಿಕೆಯು ಮೋಶೆ ಮತ್ತು ಯಹೋಶುವನ ಕಾಲದಲ್ಲಿ ಆರಂಭಗೊಂಡಿತು. ದೇವರ ಆಜ್ಞೆಯೊಂದಿಗೆ ಈ ವಗ್ದಾನವನ್ನು ಮೋಶೆಯು ಪುನರಾವರ್ತನೆ ಮಾಡಿದನು : ಆ ದೇಶವನ್ನು ನಿಮಗೆ ಕೊಟ್ಟಿದ್ದೇನೆ.... ಅದರಲ್ಲಿ ಪ್ರವೇಶ ಮಾಡಿ ಸ್ವಾಧೀನ ಮಾಡಿಕೊಳ್ಳಿರಿ (ಧ.ಕಾಂಡ 1:8).

ಧರ್ಮೋಪದೇಶಕಾಂಡ 28:1,15ನೇ ವಚನಗಳನ್ನು ಓದಿರಿ. ಈ ವಚನದಲ್ಲಿ ಏನು ಸೂಚಿತವಾಗಿ ಕೊಡಲ್ಪಟ್ಟಿದೆ? ಸಂಕ್ಷಿಪ್ತವಾಗಿ ಹೇಳುವಾಗ, ಒಡಂಬಡಿಕೆಯ ಪ್ರಯುಕ್ತ ಇಸ್ರಾಯೇಲ್ಯರಿಗೆ ದೇಶವನ್ನು (ಭೂಪ್ರದೇಶವನ್ನು) ಕೊಡಬೇಕಾಗಿತ್ತು. ಒಡಂಬಡಿಕೆಯು ಕರ್ತವ್ಯಗಳನ್ನು ನಿರ್ವಹಿಸುವಂತೆ ಸೂಚಿಸುತ್ತದೆ. ಇಸ್ರಾಯೇಲ್ಯರು ಯಾವ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿತ್ತು?

ಇಸ್ರಾಯೇಲ್ಯರು ದೇವರ ಮಾತಿಗೆ ಕಿವಿಕೊಟ್ಟು ಆತನ ಆಜ್ಞೆಗೆ ವಿಧೇಯರಾದರೆ ಸಿಗುವ ಆಶೀರ್ವಾದಗಳನ್ನು ಧ.ಕಾಂಡ 28ನೇ ಅಧ್ಯಾಯದ ಮೊದಲಭಾಗ ತಿಳಿಸುತ್ತದೆ. ಅದೇ ಅಧ್ಯಾಯದ ಉಳಿದ ಭಾಗವು ಅವರು ಅವಿಧೇಯರಾಗಿ ನಡೆದುಕೊಂಡರೆ ಅವರ ಮೇಲೆ ಬರುವ ಶಾಪಗಳನ್ನು ಕುರಿತು ಹೇಳುತ್ತದೆ.

ಪಾಪಕ್ಕೆ ತನ್ನ ಕೆಟ್ಟತನದ ಫಲಿತಾಂಶಗಳನ್ನು ತೋರಿಸಲು ಕೊಟ್ಟ ಅವಕಾಶದಿಂದ ಪೂರ್ಣವಾಗಿ ಅಲ್ಲದಿದ್ದರೂ ಬಹಳವಾಗಿ ಈ ಶಾಪಗಳು ಒದುಗುವಂಥವಾಗಿವೆ.... ತನ್ನ ಶರೀರಭಾವವನ್ನು ಕುರಿತು ಬಿತ್ತುವವನು ಆ ಭಾವದಿಂದ ನಾಶವನ್ನು ಕೊಯ್ಯುವನು (ಗಲಾತ್ಯ 6:8). ಹರಿಯುವ ನೀರಿನಂತೆ, ಅದನ್ನು ಬಿಟ್ಟಾಗ ತನ್ನ ಮಟ್ಟವನ್ನು ತುಂಬಿಕೊಳ್ಳುವವರೆಗೂ ಅದು ನಿಲ್ಲುವುದಿಲ್ಲ. ಒಂದು ಗಡಿಯಾರದಂತೆ ಅದು ತನ್ನಷ್ಟಕ್ಕೆ ತಾನು ಪೂರ್ಣವಾಗಿ ಶಕ್ತಿ ಕಳೆದು ಕಳೆದುಕೊಳ್ಳುವವರಿಗೂ ನಿಲ್ಲುವುದಿಲ್ಲ, ಒಂದು ಮರದಂತೆ ಪೂರ್ಣವಾಗಿ ಬೆಳೆದು ತನ್ನ ಫಲವನ್ನು ಕೊಡದೆ ಇರುವುದಿಲ್ಲ.

ಪಾಪವು ಹಾಗೆಯೇ ಒಂದುಮಟ್ಟಕ್ಕೆ ತುಂಬಿಕೊಳ್ಳುತ್ತದೆ. ಒಂದು ಅವಧಿಗೆ

ಚಲಿಸುತ್ತದೆ, ಒಂದು ಫಲವನ್ನು ಪಕ್ವಗೊಳಿಸುತ್ತದೆ. ಇವೆಲ್ಲವುಗಳ ಅಂತ್ಯ ಮರಣವಾಗಿರುತ್ತದೆ (ರೋಮನ್ಸ್ 6:21)– The pulpit commentary ಧರ್ಮೋಪದೇಶಕಾಂಡ ಪುಟ 439.

ಇಸ್ರಾಯೇಲ್ಯರಿಗೆ ಒಂದು ಗೊತ್ತಾದ ಭೂಪ್ರದೇಶವನ್ನು ಕೊಡುವುದಕ್ಕೆ ನಿಬಂಧನೆಗಳಿದ್ದಂತೆಯೇ ಇನ್ನಿತರೆ ವಾಗ್ದಾನಗಳು ನಿಬಂಧನೆ ರಹಿತವೇನಾಗಿರದೆ ನಿಬಂಧನೆ ಸಹಿತವಾಗಿದ್ದವು. ಇಸ್ರಾಯೇಲ್ಯರು ಒಡಂಬಡಿಕೆಯ ಅನುಸಾರ ತಮ್ಮ ಜವಾಬ್ದಾರಿಯನ್ನು (ಪಾತ್ರವನ್ನು) ನೆರವೇರಿಸಬೇಕಾಗಿತ್ತು; ಇಲ್ಲದೆ ಹೋದರೆ ವಾಗ್ದಾನಗಳು ರದ್ದಾಗಿಬಿಡುತ್ತಿದ್ದವು. ದೇವರು ಒಂದಕ್ಕಿಂತ ಹೆಚ್ಚುಸಲ ಅವರು ಅವಿಧೇಯರಾದರೆ ದೇಶವನ್ನು ಅವರಿಂದ ಹಿಂದಕ್ಕೆ ತೆಗೆದುಕೊಳ್ಳಲಾಗುತ್ತದೆ ಎಂದು ಸ್ಪಷ್ಟಪಡಿಸಿದನು. ಯಾಜಕಕಾಂಡ 26:27–33 ವಚನಗಳನ್ನು ಓದಿರಿ. ದೇವರು ತಾನು ತಿಳಿಸಬೇಕಾದುದನ್ನು ಮುಚ್ಚು ಮರೆಯಿಲ್ಲದೆ ಬಹಳ ಸ್ಪಷ್ಟವಾಗಿ ವ್ಯಕ್ತಪಡಿಸುತ್ತಾನೆ.

ಕ್ರೈಸ್ತರಾಗಿ ದೇವರು ವಾಗ್ದಾನ ಮಾಡಿರುವ ನೂತನ ಆಕಾಶಮಂಡಲವನ್ನೂ ನೂತನ ಭೂಮಂಡಲವನ್ನೂ ಅಂಗೀಕರಿಸಲು ಮುನ್ನೋಡುತ್ತಿದ್ದೇವೆ. ಹೇಗೆ ಯೆಹೂದ್ಯರಿಗೆ ಈ ಲೋಕದ ಭೂಪ್ರದೇಶವು ವಾಗ್ದಾನ ಮಾಡಲ್ಪಟ್ಟಿತೋ ಹಾಗೆಯೇ ನಮಗೆ ನೂತನ ಭೂಮ್ಯಾಕಾಶಗಳು ವಾಗ್ದಾನ ಮಾಡಲ್ಪಟ್ಟಿವೆ. ಒಂದೇ ವ್ಯತ್ಯಾಸವೇನೆಂದರೆ ಒಮ್ಮೆ ನಾವು ಅಲ್ಲಿಗೆ ಸೇರಿದರೆ ಎಂದೆಂದಿಗೂ ನಾವು ಅದನ್ನು ಕಳೆದುಕೊಳ್ಳುವ ಸಾಧ್ಯತೆಯೇ ಇರುವುದಿಲ್ಲ (ದಾನಿ 7:18). ಅದೇ ವೇಳೆ ಅಲ್ಲಿಗೆ ಸೇರುವುದಕ್ಕೆ ಅನೇಕ ನಿಬಂಧನೆಗಳಿವೆ. ರಕ್ಷಣೆಯೆಂಬುದು ನಂಬಿಕೆಯಿಂದ ಮಾತ್ರವೆಂದು ಹೇಳುವ ಸಂದರ್ಭದಲ್ಲಿ ಈ ನಿಬಂಧನೆಗಳಾವುವು ಎಂದು ಅರ್ಥಮಾಡಿಕೊಳ್ಳುವಿರಿ?

**ಮಂಗಳವಾರ** **ಮೇ 4**

## ಇಸ್ರಾಯೇಲ್ಯರು ಮತ್ತು ಒಡಂಬಡಿಕೆ

"ಅವರಾದರೋ ಕೇಳಲಿಲ್ಲ, ಕಿವಿಗೊಡಲಿಲ್ಲ, ಪ್ರತಿಯೊಬ್ಬನೂ ತನ್ನ ತನ್ನ ದುಷ್ಟಹೃದಯದ ಹಠಕ್ಕೆ ತಕ್ಕ ಹಾಗೆ ನಡೆದನು; ಆದಕಾರಣ ಕೈಕೊಳ್ಳಬೇಕೆಂದು

ನಾನು ಆಜ್ಞಾಪಿಸಿದರೂ ಅವರು ಕೈಕೊಳ್ಳದ ಈ ನಿಬಂಧನೆಯ ಶಾಪಗಳನ್ನೆಲ್ಲಾ ಅವರ ಮೇಲೆ ಬರಮಾಡಿದೆನು" ಯೆರೆ 11:8.

ಮೇಲಿನ ವಚನವನು ನೋಡೋಣ: ದೇವರು ಈ ನಿಬಂಧನೆಯ ಶಾಪಗಳನ್ನೆಲ್ಲಾ ಅವರ ಮೇಲೆ ಬರಮಾಡುವೆನು ಎಂದು ಹೇಳುತ್ತಾನೆ. ಆದಾಗ್ಯೂ ಇಲ್ಲಿ ತಮಗೆ ಇಷ್ಟವಾಗದಿರುವುದನ್ನು ಹೇಳುತ್ತಿದ್ದಾನೆ. ಒಡಂಬಡಿಕೆಯು ನಮಗೆ ಯಾವಾಗಲೂ ಒಳ್ಳೆಯದನ್ನೇ ಕೊಡುವಂಥದ್ದಾಗಿದೆ ಎಂದು ತಿಳುಕೊಳ್ಳುತ್ತೇ-ವಾದರೂ ನಮಗೆ ಕಷ್ಟವೆನಿಸುವ ಭಾಗವೂ ಇದೆ. ಈ ಒಂದು ನಿಯಮವನ್ನು ನೋಹನ ವಿಷಯದಲ್ಲಿ ನುಡಿದೆವು. ದೇವರು ನೋಹನಿಗೆ, ನಾಶದಿಂದ ಸಂರಕ್ಷಣೆ ಮಾಡಿಕೊಳ್ಳುವಂಥದ್ದನ್ನು ಕೊಟ್ಟನು. ನೋಹನು ಆಶೀರ್ವಾದಗಳನ್ನು ಪಡೆದುಕೊಳ್ಳುವ ಸಲುವಾಗಿ ವಿಧೇಯತೆ ತೋರಬೇಕಾಗಿತ್ತು. ಹಾಗೆ ಮಾಡದಿದ್ದಾಗ ಒಡಂಬಡಿಕೆಯ ಇನ್ನೊಂದು ಭಾಗ (ಅಪಾಯ)ವನ್ನು ಅನುಭವಿಸಬೇಕಾಗಿತ್ತು.

ಮೇಲಿನ ವಚನವನ್ನು ಆದಿಕಾಂಡ 6:5 ವಚನದೊಂದಿಗೆ ಹೋಲಿಸಿರಿ ಇವುಗಳಲ್ಲಿ ಯಾವ ಸಮಾನತೆ ಇದೆ? ನಮ್ಮ ಆಲೋಚನೆಗಳನ್ನು ನಾವು ನಿಗ್ರಹಿಸಿಕೊಳ್ಳುವುದು ತುಂಬ ಮುಖ್ಯವಾಗಿದೆ ಎಂಬುದರ ಬಗ್ಗೆ ಈ ವಚನಗಳು ಏನು ಹೇಳುತ್ತವೆ? ದೌರ್ಭಾಗ್ಯವೇನೆಂದರೆ ಇಸ್ರಾಯೇಲ್ ಜನಾಂಗದ ಚರಿತ್ರೆಯ ಹೆಚ್ಚಿನ ಭಾಗವು ಪುನರಾವರ್ತಿತ ಧರ್ಮಭ್ರಷ್ಟತೆಯ ಮಾದರಿಯಾಗಿದ್ದು ಇದರ ದೆಸೆಯಿಂದ ಆಗುವ ದೇವರ ತೀರ್ಪುಗಳು, ಪಶ್ಚಾತ್ತಾಪ ನಂತರ ವಿಧೇಯತೆ ತೋರುವುದನ್ನು ನಾವು ನೋಡುತ್ತೇವೆ. ಕೇವಲ ದಾವೀದನ ಮತ್ತು ಸೊಲೊಮೋನನ ಅಲ್ಪಾವಧಿಯ ಆಡಳಿತದಲ್ಲಿ ಇಸ್ರಾಯೇಲ್ಯರು ತಮಗೆ ವಾಗ್ದಾನವಾಗಿ ಬಂದ ಭೂಪ್ರದೇಶದ ಮೇಲೆ ನಿಯಂತ್ರಣ ಹೊಂದಿದ್ದರು.

ಇಸ್ರಾಯೇಲ್ಯರ ಧರ್ಮಭ್ರಷ್ಟತೆಯ ಬಗ್ಗೆ ಯೆರೆಮೀಯ ಪುಸ್ತಕದಲ್ಲಿರುವ ಈ ವಚನಗಳನ್ನು ನೋಡಿರಿ. "ಒಬ್ಬ ಗಂಡಸು ತನ್ನ ಹೆಂಡತಿಯನ್ನು ತ್ಯಜಿಸಿದ ಮೇಲೆ ಆಕೆಯು ಮತ್ತೊಬ್ಬನ ಹೆಂಡತಿಯಾದ ಮೇಲೆ ಅವಳನ್ನು ಆಕೆಯ ಮೊದಲ ಗಂಡನು ಸೇರಿಸಿಕೊಳ್ಳುವನೇ? ಒಂದುವೇಳೆ ಆತನು ಸೇರಿಸಿಕೊಂಡರೆ ಆ ದೇಶವು ಕೇವಲ ಅಪವಿತ್ರವಾಗಿ ಹೋಗುವುದಲ್ಲವೇ? ಆದರೆ ನೀನು ಬಹುಮಂದಿಯ ಜೊತೆ ವ್ಯಭಿಚಾರ ಮಾಡಿ ನನ್ನ ಬಳಿಗೆ ಬರುವೆಯಾ?

ಎಂದು ಇಸ್ರಾಯೇಲ್ ದೇಶವನ್ನು ಕುರಿತು ದೇವರು ಹೇಳಿದನು. ಇಸ್ರಾಯೇಲ್ ವಂಶದವರೇ, ಒಬ್ಬ ಹೆಂಗಸು ಪತಿದ್ರೋಹ ಮಾಡುವಂತೆ ನೀವು ನನಗೆ ದ್ರೋಹ ಮಾಡಿಯೇ ಇದ್ದೀರಿ ಎಂದು ಯೆಹೋವನು ಅನ್ನುತ್ತಾನೆ" (ಯೆರೆ 3:1,20).

ಇದು ಮೊದಲನೆಯ ಭಾಗಕ್ಕೆ ಮುಟ್ಟುವಂತಹ ವಿಷಯವನ್ನು ತರುತ್ತದೆ. ದೇವರು ನಮ್ಮ ಜೊತೆ ಮಾಡಿಕೊಳ್ಳುವ ಒಡಂಬಡಿಕೆಯು ವ್ಯಾಪಾರಸ್ಥರು ತಮಗೆ ಹೆಚ್ಚಿನ ಲಾಭವು ಲಭಿಸುವಂತೆ ಮಾಡಿಕೊಳ್ಳುವ ಒಪ್ಪಂದವಾಗಿರುವುದಿಲ್ಲ. ಒಡಂಬಡಿಕೆಯು ಸಂಬಂಧವು ಒಂದುಬದ್ಧತೆಯುಳ್ಳದ್ದು. ವಿವಾಹದ ಒಡಂಬಡಿಕೆಯಂತೆ ಗಂಭೀರವು ಪವಿತ್ರವೂ ಆದದ್ದು. ಆದುದರಿಂದಲೇ ದೇವರು ತನಗೂ ಇಸ್ರಾಯೇಲ್ಯರಿಗೂ ಏರ್ಪಟ್ಟ ಒದಂಬಡಿಕೆಯನ್ನು ಗಂಡಹೆಂಡತಿಯ ನಡುವೆ ಇರುವ ಸಂಬಂಧಕ್ಕೆ ಹೋಲಿಸುತ್ತಾನೆ. ವಿಷಯವೇನೆಂದರೆ ಇಸ್ರಾಯೇಲ್ಯರ ಧರ್ಮಭ್ರಷ್ಟತೆಯ ಮೂಲ ಅವಿಧೇಯತೆ ಆಗಿರದೆ ದೇವರೊಂದಿಗೆ ಅವರು ಮುರಿದುಕೊಂಡ ಸಂಬಂಧವೇ ಆಗಿದೆ, ಅವಿಧೇಯತೆಯಿಂದ ಮುರಿದು ಹೋದ ಸಂಬಂಧವು ಫಲಿತಾಂಶರೂಪವಾಗಿ ಅವರ ಮೇಲೆ ಶಿಕ್ಷೆಯನ್ನು ತರುತ್ತದೆ.

ಯಾಕೆ ಕ್ರೈಸ್ತೀಯ ಜೀವಿತದಲ್ಲಿ ವೈಯಕ್ತಿಕವಾಗಿ ಸಂಬಂಧವನ್ನು ಇಟ್ಟುಕೊಳ್ಳುವುದು ಬಹಳ ಮುಖ್ಯವಾಗಿದೆ? ದೇವರೊಂದಿಗಿನ ನಮ್ಮ ಸಂಬಂಧ ಸರಿ ಇಲ್ಲವಾದರೆ, ನಾವು ಪಾಪ ಮತ್ತು ಅವಿಧೇಯತೆಗೆ ಪಕ್ಕಾಗುತ್ತೇವೆಯೇ? ಒಬ್ಬನು ನಿಮ್ಮ ಹತ್ತಿರ ಬಂದು ನಾನು ದೇವರೊಂದಿಗೆ ಗಾಢವಾದ ಪ್ರೀತಿಯ ಸಂಬಂಧವನ್ನು ಬೆಳೆಸಿಕೊಳ್ಳುವುದು ಹೇಗೆ ಎಂದು ಪ್ರಶ್ನೆ ಕೇಳಿದರೆ ನೀವು ಆತನಿಗೆ ಏನು ಹೇಳುವಿರಿ?

**ಬುಧವಾರ** **ಮೇ 5**

## ಉಳಿದವರು

ಇಸ್ರಾಯೇಲ್ಯರ ಪುನರಾವರ್ತಿತ ಧರ್ಮಭ್ರಷ್ಟತೆ, ದೈವೀಕ ತೀರ್ಪು ಮತ್ತು ಪಶ್ಚಾತ್ತಾಪ ಇವುಗಳ ನಡುವೆ ಈ ಕೆಳಗಿನ ವಚನಗಳಲ್ಲಿ ಯಾವ ನಿರೀಕ್ಷೆಯನ್ನು ಕಂಡುಕೊಳ್ಳುತ್ತೇವೆ?

ಯೆಶಾಯ 4:3 ______________________

ಮೀಕ 4:6,7 ______________________

ಜೆಫನ್ಯ 3:12,13 ______________________

ಪುರಾತನ ಇಸ್ರಾಯೇಲ್ಯರಿಗಾಗಿ ದೇವರು ಮಾಡಿದ ಯೋಜನೆಯು ಅವರ ಅವಿಧೇಯತೆಯಿಂದ ಕೆಟ್ಟುಹೋದಾಗ್ಯೂ ಅದು ಎಂದೆಂದಿಗೂ ನಿಶ್ಫಲವಾಗಲಿಲ್ಲ. ಕಳೆ ಸಸ್ಯಗಳ ಮಧ್ಯೆ ಕೆಲವು ಹೂವಿನ ಗಿಡಗಳು ಸಹಾ ಬೆಳೆಯುತ್ತವೆ. ದೇವರು ತನಗಾಗಿ ಕೂಡಿಸಿಕೊಂಡ ಸುಂದರವಾದ ಹೂಗೊಂಚಲಿನಂತೆ (ತುರಾಯಿ) ವಿಧೇಯರಾಗಿ ದೇವರಿಗೆ 'ಉಳಿದುಕೊಂಡವರ' ಬಗ್ಗೆ ಹಳೆಒಡಂಬಡಿಕೆಯ ಅನೇಕ ಪ್ರವಾದಿಗಳು ಮಾತಾಡಿದ್ದಾರೆ.

ದೇವರು ತನಗಾಗಿ ವಿಧೇಯರಾಗಿ ಉಳಿದುಕೊಂಡವರನ್ನು ಹುಟ್ಟಿಸಿ ಅವರನ್ನು ಸಂರಕ್ಷಣೆ ಮಾಡುವ ಉದ್ದೇಶವೇನೆಂದರೆ ಇಡೀ ಇಸ್ರಾಯೇಲ್ಯರನ್ನು ಇಟ್ಟಿದ್ದ ಪ್ರಕಾರವೇ ಅವರನ್ನು ತನ್ನ ಮಹಿಮೆಯನ್ನು ಜನಾಂಗಗಳ ಮಧ್ಯೆ ಘೋಷಿಸಲು ದೈವೀಕವಾಗಿ ನೇಮಿಸಲ್ಪಟ್ಟ ಉಪಕರಣಗಳನ್ನಾಗಿ ಮಾದುವುದಾಗಿದೆ (ಯೆಶಾಯ 66:19).

ಇವರ ಮುಖಾಂತರ ಇತರರೂ ಸಹಾ ರಾಜನನ್ನು, ಸೇನಾಧೀಶ್ವರನಾದ ಕರ್ತನನ್ನು ಆರಾಧಿಸಲು ನಂಬಿಗಸ್ತರ ಜೊತೆ ಸೇರಿಕೊಳ್ಳುತ್ತಾರೆ (ಜೆಕರ್ಯ 14:16).

ಹಾಗಾಗಿ, ಸನ್ನಿವೇಶವು ಎಷ್ಟೇ ಕೆಟ್ಟದಾಗಿದ್ದರೂ ತಾನು ಆರಿಸಿಕೊಂಡವರ ಮಧ್ಯೆ ಧರ್ಮಭ್ರಷ್ಟತೆ ಇದ್ದಾಗ್ಯೂ ದೇವರು ಯಾವಾಗಲೂ ಕೆಲವು ನಂಬಿಗಸ್ತ ಜನರನ್ನು ಇಟ್ಟಿರುತ್ತಾನೆ. ಅವರು ತಮ್ಮ ಕರೆಯುವಿಕೆಯನ್ನು ಮತ್ತು ಆರಿಸುವಿಕೆಯನ್ನು ದೃಢಪಡಿಸಿಕೊಳ್ಳುವವರಾಗಿರುತ್ತಾರೆ (2 ಪೇತ್ರ 1:10). ಸಂಕ್ಷಿಪ್ತವಾಗಿ ಹೇಳುವುದಾದರೆ, ಇಡೀ ಜನಾಂಗದ ವಿಫಲತೆಯು ಎಷ್ಟೇ ಆಗಿದ್ದರೂ ಕೆಲವರು ಒಡಂಬಡಿಕೆಯ ಸಲುವಾಗಿ ತಮ್ಮ ಕರ್ತವ್ಯವನ್ನು ತಮಗೆ ಸಾಧ್ಯವಾದಷ್ಟು ಉತ್ತಮಮಟ್ಟಕ್ಕೆ ಇಟ್ಟುಕೊಳ್ಳಲು ಪ್ರಯತ್ನಿಸುವವರಾಗಿರುತ್ತಾರೆ (ಉದಾಹರಣೆಗೆ 1 ಅರಸುಗಳು 19:14–18ನ್ನು ನೋಡಿರಿ). ಒಂದುವೇಳೆ ಆ ಕೆಲವರು ಇಡೀ

ದೇಶದ ಜನರೊಂದಿಗೆ ಕಷ್ಟಗಳನ್ನು ಅನುಭವಿಸಿದಾಗ್ಯೂ (ದೇಶದಿಂದ ಜನರು ಗಡಿಪಾರಾದ ಸಂದರ್ಭದಲ್ಲಿ ಕಷ್ಟ ಅನುಭವಿಸಿದಂತೆ) ಒಡಂಬಡಿಕೆಯ ಅಂತಿಮ ಮತ್ತು ಅತ್ಯುನ್ನತ ವಾಗ್ದಾನವಾದ ನಿತ್ಯಜೀವವು ಅವರದಾಗುತ್ತದೆ.

ಯೋಹಾನ 10:27,28ನೇ ವಚನಗಳನ್ನು ಓದಿರಿ. ಯೇಸುಕ್ರಿಸ್ತನು ಅಲ್ಲಿ ಏನು ಹೇಳುತ್ತಿದ್ದಾನೆ? ಪುರಾತನ ಇಸ್ರಾಯೇಲ್ಯರ ಧರ್ಮಭ್ರಷ್ಟತೆಗೆ ಸಂಬಂಧಪಟ್ಟ ಸನ್ನಿವೇಶಕ್ಕೆ ಯೇಸುಕ್ರಿಸ್ತನ ಮಾತನ್ನು ಮತ್ತು ಅದರಲ್ಲಿರುವ ವಾಗ್ದಾನವನ್ನು ಅನ್ವಯ ಮಾಡಿರಿ. ನಂಬಿಗಸ್ತರಾಗಿ ಉಳಿದವರ ಅಸ್ತಿತ್ವವನ್ನು ವಿವರಿಸಲು ಈ ಮಾತುಗಳು ಹೇಗೆ ಸಹಾಯ ಮಾಡುತ್ತವೆ?

ಕೆಲವು ವರ್ಷಗಳ ಹಿಂದೆ ಒಬ್ಬ ತರುಣಸ್ತ್ರೀಯು ತನ್ನ ಕ್ರೈಸ್ತೀಯ ನಂಬಿಕೆಯನ್ನು ಸಂಪೂರ್ಣವಾಗಿ ಆ ಸ್ಥಳೀಯ ಸಭೆಯಲ್ಲಿದ್ದ ಪಾಪ, ಧರ್ಮಭ್ರಷ್ಟತೆ ಮತ್ತು ಕಪಟತನದ ನಿಮಿತ್ತ ಬಿಟ್ಟುಬಿಟ್ಟಳು. ಆ ಜನರು ನಿಜವಾಗಿಯೂ ಕ್ರೈಸ್ತರಾಗಿರಲಿಲ್ಲ. ಅದಕ್ಕೆ ಸಭೆಯನ್ನು ಬಿಟ್ಟು ಬಿಟ್ಟೆನು ಎಂಬುದಾಗಿ ಆಕೆಯು ನೆಪ ಹೇಳಿದಳು. ಯಾಕೆ ಅವಳು ಕೊಟ್ಟಕಾರಣವು ಸಮ್ಮತವಾದುದಲ್ಲ? ಈ ದಿನದ ಪಾಠದ ನಿಯಮಾನುಸಾರ ನಿಮ್ಮ ಉತ್ತರವನ್ನು ಕೊಡಿರಿ.

**ಗುರುವಾರ** **ಮೇ 6**

## ಆತ್ಮೀಕ ಇಸ್ರಾಯೇಲ್ಯರು

ಪುರಾತನ ಇಸ್ರಾಯೇಲ್ಯರ ಪ್ರಮಾದಗಳು ಮತ್ತು ವಿಫಲತೆಗಳು ಏನೇ ಆಗಿರಲಿ ದೇವರು ತನ್ನನ್ನು ಸೇವಿಸುವ ನಂಬಿಗಸ್ತ ಜನರನ್ನು ಸೃಷ್ಟಿಸುವ ಯೋಜನೆಯನ್ನು ನಿಲ್ಲಿಸಿಬಿಡಲಿಲ್ಲ.

ಸತ್ಯಸಂಗತಿ ಏನೆಂದರೆ, ದೇವರು ಯೆಹೂದ್ಯ ಅಥವಾ ಗ್ರೀಕರೆಂಬ ಭೇದವಿಲ್ಲದೆ ಎಲ್ಲಾ ಜನಾಂಗಗಳಲ್ಲೂ ತನ್ನ ಸುವಾರ್ತೆಯನ್ನು ಲೋಕಕ್ಕೆ ಸಾರುವ ನಂಬಿಗಸ್ತ ವಿಶ್ವಾಸಿಗಳ ಸಭೆಯನ್ನು ಅಂದರೆ ಆತ್ಮೀಕ ಇಸ್ರಾಯೇಲ್ಯರನ್ನು ಉಂಟುಮಾಡುವ ಕಾಲವನ್ನು ಹಳೆಯ ಒಡಂಬಡಿಕೆಯು ಎದುರು ನೋಡುತ್ತಾ ಇತ್ತು. ಪ್ರಪ್ರಥಮ ಸಭೆಗೆ ಸ್ವಾಗತ ಕೋರೋಣ!

ಓದಿರಿ ಗಲಾತ್ಯ 3:26–29).

1. ಪೌಲನು ಗಲಾತ್ಯ 3:29ರಲ್ಲಿ ಯಾವ ವಾಗ್ದಾನವನ್ನು ಕುರಿತು ಮಾತಾಡುತ್ತಿದ್ದಾನೆ?
2. ಒಬ್ಬ ವ್ಯಕ್ತಿಯನ್ನು ವಾಗ್ದಾನಕ್ಕೆ ಬಾಧ್ಯಸ್ತನನನ್ನಾಗಿಸುವ ಮುಖ್ಯವಾದ ಅಂಶ ಯಾವುದು? (ಗಲಾತ್ಯ 3:26ನ್ನು ನೋಡಿರಿ).
3. ಪೌಲನು ಯಾಕೆ ಲಿಂಗಭೇದ, ರಾಷ್ಟ್ರಭೇದ ಮತ್ತು ಸಾಮಾಜಿಕ ಭೇದಗಳನ್ನು ಮುರಿಯುತ್ತಿದ್ದಾನೆ?
4. ಕ್ರಿಸ್ತನಲ್ಲಿ ಒಂದಾಗಿರುವುದು ಎಂದರೆ ಏನು ಅರ್ಥಕೊಡುತ್ತದೆ?
5. ರೋಮಾಪುರದವರಿಗೆ ಪತ್ರದಲ್ಲಿ 4:16,17 ವಚನಗಳನ್ನು ಓದಿರಿ.

ಪೌಲನು ಗಲಾತ್ಯ 3:26–29 ವಚನಗಳಲ್ಲಿ ಹೇಳುವುದನ್ನು ಅರ್ಥಮಾಡಿಕೊಳ್ಳಲು ರೋಮನ್ಸ್ 4:16,17 ವಚನಗಳು ಹೇಗೆ ಸಹಾಯ ಮಾಡುತ್ತವೆ?

ಅಬ್ರಹಾಮನ ಮಗನಾಗಿ ಯೇಸುಕ್ರಿಸ್ತನು ಒಡಂಬಡಿಕೆಯ ವಾಗ್ದಾನಗಳಿಗೆ ವಿಶೇಷವಾದ ರೀತಿಯಲ್ಲಿ ಬಾಧ್ಯಸ್ಥನಾದನು. ದೀಕ್ಷಾಸ್ನಾನ ಪಡೆದುಕೊಳ್ಳುವುದರಿಂದ ನಾವು ಕ್ರಿಸ್ತನವರಾಗುತ್ತೇವೆ. ಅದರ ಮುಖಾಂತರ ಅಬ್ರಹಾಮನಿಗೆ ಮಾಡಿದ ವಾಗ್ದಾನಗಳಿಗೆ ಬಾಧ್ಯಸ್ತರಾಗಲು ಹಕ್ಕು ಪಡೆದುಕೊಳ್ಳುತ್ತೇವೆ. ಹಾಗಾಗಿ ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದುದೆಲ್ಲವೂ ಕ್ರಿಸ್ತನಲ್ಲಿ ದೊರಕುತ್ತದೆ ನಂತರ ಆ ವಾಗ್ದಾನಗಳು ನಮ್ಮದಾಗುತ್ತವೆ. ಹೀಗೆ ಆಗುವುದು ದೇವರ ಕೃಪೆಯಲ್ಲಿ ನಾವು ನಂಬಿಕೆ ಇಡುವುದರ ಮೂಲಕ ಹೊರತು ನಮ್ಮ ರಾಷ್ಟ್ರೀಯತೆ, ಕುಲ ಅಥವಾ ಲಿಂಗವಾಗಲಿ ಕಾರಣವಾಗುವುದಿಲ್ಲ.

ಅಬ್ರಹಾಮನಿಗೆ ಮತ್ತು ಆತನ ಸಂತತಿಗೆ ಕೊಟ್ಟಿರುವ ವಾಗ್ದಾನವು ಕಾನಾನ್ ದೇಶ ಮಾತ್ರವಲ್ಲದೆ ಇಡೀ ಭೂಮಿಯನ್ನೇ ಒಳಗೊಂಡಿದೆ. ನೀನು ಲೋಕಕ್ಕೆ ಬಾಧ್ಯನಾಗುವಿ ಎಂಬ ವಾಗ್ದಾನವು ಅಬ್ರಹಾಮನಿಗಾಗಲಿ ಅವನ ಸಂತತಿಯರಿಗಾಗಲಿ ಧರ್ಮಶಾಸ್ತ್ರದಿಂದಾದುದಲ್ಲ; ನಂಬಿಕೆಯೆಂಬ ನೀತಿಯಿಂದ ಆದದ್ದೇ (ರೋಮ 4:13) ಎಂಬುದಾಗಿ ಪೌಲನು ಹೇಳುತ್ತಾನೆ. ಅಬ್ರಹಾಮನಿಗೆ

ಮಾಡಿದ ವಾಗ್ದಾನಗಳು ಕ್ರಿಸ್ತನ ಮೂಲಕ ನೆರವೇರಬೇಕೆಂದು ವಿಶ್ವಾಸಿಗಳು ಲಯ ಕಳಂಕ ಕ್ಷಯವಿಲ್ಲದ ಬಾಧ್ಯತೆಯನ್ನು ಹೊಂದುವರೆಂದು (1 ಪೇತ್ರ 1:4) ಆವಾಗ ಭೂಮಿಗೆ ಪಾಪದಿಂದ ಬಿಡುಗಡೆಯಾಗುತ್ತದೆಯೆಂದು ಸತ್ಯವೇದವು ಸುಲಭವಾದ ರೀತಿಯಲ್ಲಿ ಸರಳವಾಗಿ ತಿಳಿಸುತ್ತದೆ" ಎಲೆನ್ ಜಿ ವೈಟಮ್ಮನವರ "ನಮ್ಮ ಪಿತೃಗಳು ಮತ್ತು ಪ್ರವಾದಿಗಳು" ಪುಸ್ತಕದ 170ನೇ ಪುಟ. ದೇವರಿಂದ ವಿಮೋಚಿಸಲ್ಪಟ್ಟವರು ನೂತನ ಭೂಮಿಯಲ್ಲಿ ಕ್ರಿಸ್ತನೊಂದಿಗೆ ಸದಾಕಾಲಕ್ಕೂ ಜೀವಿಸುವವರಾದಾಗ ಈ ವಾಗ್ದಾನವು ನೆರವೇರುತ್ತದೆ (ದಾನಿ 7:27).

**ಶುಕ್ರವಾರ** **ಮೇ 27**

**ಹೆಚ್ಚಿನ ಚಿಂತನೆಗೆ :** ಎಲೆನ್ ಜಿ ವೈಟಮ್ಮನವರ "ಪ್ರವಾದಿಗಳು ಮತ್ತು ಅರಸರು" ಪುಸ್ತಕದಲ್ಲಿ ದೇವರ ದ್ರಾಕ್ಷೇತೋಟ ಪುಟ 15–22, "ಅನ್ಯರಿಗೆ ನಿರೀಕ್ಷೆ" ಪುಟ 367–378 ಮತ್ತು 'ಇಸ್ರಾಯೇಲ್ಯರ ನಿವಾಸ' ಪುಟ 703–721ನ್ನು ಓದಿರಿ.

ದೇವರು ಯಾವುದೇ ರಾಷ್ಟ್ರೀಯತೆ, ಜನಾಂಗ ಮತ್ತು ಜಾತಿಯ ಆಧಾರದ ಮೇಲೆ ತಾರತಮ್ಯ ಮಾಡುವವನಲ್ಲ. ಆತನು ಸಮಸ್ತ ಜನಾಂಗವನ್ನು (ಮಾನವ ಕುಲವನ್ನು) ಮಾಡಿದಾತನು. ಸೃಷ್ಟಿಯಿಂದ ಎಲ್ಲಾ ಮನುಷ್ಯರು ಒಂದೇ ಕುಟುಂಬವಾಗಿರುವಂತೆ ಎಲ್ಲರೂ ವಿಮೋಚನೆಯ ಮೂಲಕ ಒಂದೇ ಆಗಿರುತ್ತಾರೆ. ಯೇಸುಕ್ರಿಸ್ತನು ಪ್ರತ್ಯೇಕ ಪಡಿಸುವ ಪ್ರತಿಯೊಂದು ಗೋಡೆಯನ್ನು ಕೆಡವಿ ಹಾಕುವುದಕ್ಕೆ ಬಂದನು, ಪ್ರತಿಯೊಂದು ಆತ್ಮಕ್ಕೂ ದೇವರ ಸಾನಿಧ್ಯವು ಮುಕ್ತವಾಗಿ ನಿಲುಕುವಂತೆ ದೇವಾಲಯದ ಪ್ರಾಕಾರದ ಎಲ್ಲಾ ಅಂಕಣಗಳನ್ನು ತೆರೆದಿಟ್ಟನು. ಆತನ ಪ್ರೀತಿಯು ಅತ್ಯಂತ ವಿಶಾಲವಾದುದು ಅತ್ಯಂತ ಆಳವಾದುದೂ ಅತ್ಯಂತ ಪೂರ್ಣವಾದದೂ ಆಗಿದ್ದು ಸರ್ವಸ್ಥಳಗಳನ್ನು ಭೇದಿಸಿಕೊಂಡು ಹೋಗುತ್ತದೆ. ಸೈತಾನನ ವಂಚನೆಗೆ ಒಳಗಾಗಿ ಮರಳಾಗಿರುವವರನ್ನು ಕ್ರಿಸ್ತನ ಪ್ರೀತಿಯು ಒಳಗಾಗಿ ಮರುಳಾಗಿರುವವರನ್ನು ಅವನ ಪ್ರಭಾವದಿಂದ ಹೊರಕ್ಕೆ ಎತ್ತಿ ದೇವರ ಸಿಂಹಾಸನವು ಅವರಿಗೆ ನಿಲುಕುವಷ್ಟು ಹತ್ತಿರದಲ್ಲಿ ಇಡುತ್ತಾನೆ. ಆ ಸಿಂಹಾಸನವು ಆತನ ವಾಗ್ದಾನದಿಂದ ಸುತ್ತುವರೆದಿದೆ. ಯೇಸುಕ್ರಿಸ್ತನಲ್ಲಿರುವವರಿಗೆ ಯೆಹೂದ್ಯ ಗ್ರೀಕನೆಂತಲೂ ಯಜಮಾನ ಆಳು ಎಂತಲೂ ಭೇದವಿರುವುದಿಲ್ಲ– ಎಲೆನ್ ಜಿ

ವೈಟಮ್ಮನವರ ಪ್ರವಾದಿಗಳು ಮತ್ತು ಅರಸರುಗಳು ಪುಸ್ತಕದಲ್ಲಿ ಪುಟ 369, 370.

1 ಪೇತ್ರ 2:9,10 ವಚನಗಳನ್ನು ಓದಿರಿ ಸಭೆಗೆ ಅನ್ವಯವಾಗುವ ಪೇತ್ರನ ನಾಲ್ಕು ಬಿರುದುಗಳನ್ನು ಕಂಡುಕೊಳ್ಳಿರಿ. ಈ ಎಲ್ಲಾ ಬಿರುದುಗಳು ಇಸ್ರಾಯೇಲ್ಯರನ್ನು ಸೂಚಿಸುವುವುಗಳಾಗಿದ್ದು ಹಳೆಯ ಒಡಂಬಡಿಕೆಯಲ್ಲಿ ಪ್ರತಿಬಿಂಬಿತವಾಗಿವೆ – ವಿ.ಕಾಂಡ 19:6 ಮತ್ತು ಯೆಶಾಯ 43:20. ಈ ಪ್ರತಿಯೊಂದು ಬಿರುದುಗಳು ಸಭೆಗೆ ದೇವರೊಂದಿಗಿರುವ ಸಂಬಂಧಗಳ ಬಗ್ಗೆ ಯಾವುದಕ್ಕೆ ಒತ್ತು ಕೊಡುತ್ತದೆ?

(ಉದಾಹರಣೆಗೆ 'ಆರಿಸಿಕೊಂಡ ಜನಾಂಗ' ಎಂಬ ಬಿರುದು ದೇವರು ಸಭೆಯನ್ನು ಆರಿಸಿಕೊಳ್ಳುತ್ತಾನೆ ಮತ್ತು ಅದಕ್ಕೆ ಒಂದು ಗತಿಯನ್ನು ಏರ್ಪಡಿಸುತ್ತಾನೆ ಎಂಬ ಸಂಗತಿಗೆ ಒತ್ತು ನೀಡುತ್ತದೆ).

## ಆರೋಗ್ಯದ ಲೇಖನಮಾಲೆ
### ಆರನೇ ವಾರ

### * ಸಕ್ಕರೆ ರೋಗ

**ಸಕ್ಕರೆ ರೋಗವೆಂದರೇನು?**

ಮೂತ್ರದಲ್ಲಿ ಸಕ್ಕರೆ ಹೋಗುವ, ಬಹಳ ಬಾಯಾರಿಕೆ ಅತಿಮೂತ್ರ ವಿಸರ್ಜನೆ ಆಗುವ, ದೇಹ ಕೃಶವಾಗುತ್ತಾ ಹೋಗುವ ಒಂದು ರೋಗ.

**ಗುರುತಿಸುವುದು ಹೇಗೆ?**

ಒಬ್ಬ ವ್ಯಕ್ತಿಯು ಪದೇ ಪದೇ ಮೂತ್ರ ವಿಸರ್ಜನೆ ಮಾಡಿದಾಗ ಹಾಗೂ ಅತಿಯಾದ ಬಾಯಾರಿಕೆ ಮತ್ತು ಹಸಿವೆ ಉಂಟಾದಾಗ ಮತ್ತು ಶೀಘ್ರವಾಗಿ ಆಯಾಸಗೊಂಡಾಗ ಅವನು ಸಕ್ಕರೆ ರೋಗಕ್ಕೆ ಒಳಗಾಗಿದ್ದಾನೆಂದು ತಿಳಿಯಬಹುದು. ಅವನು ಉಪವಾಸ ಮಾಡಿದಾಗ, ರಕ್ತ ಸಕ್ಕರೆಯ ಪ್ರಮಾಣ ನೂರರ ಮೇಲಿರುತ್ತದೆ.

**ಕಾರಣವೇನು?**

ಜಠರದ ಸಮೀಪದಲ್ಲಿ ಮೇದೋಜೀರಕ ಎಂಬ ರಸಗ್ರಂಥಿಯಿದೆ. ಇದು ಮುಂಗುರುಳಿನೊಳಕ್ಕೆ ಒಂದು ವಿಧವಾದ ಜೀರಕ ರಸವನ್ನು ಹರಿಸುತ್ತದೆ. ಈ

ರಸಗ್ರಂಥಿಯು ಸಕ್ಕರೆ ರೋಗ ನಿವಾರಣೆಗೆ ಸಾಧಕವಾದ ಇನ್ಸುಲಿನ್ ಎಂಬ ಒಂದು ಔಷಧವನ್ನು ತಯಾರಿಸುತ್ತದೆ. ಮೇದೋಜೀರಕ ಗ್ರಂಥಿಯು ಸಾಕಷ್ಟು ಇನ್ಸುಲಿನ್ ತಯಾರಿಸದಿದ್ದರೆ ಒಂದನೇ ವಿಧದ ಸಕ್ಕರೆ ರೋಗ ಎನ್ನುತ್ತಾರೆ. ಆದರೆ ಇನ್ಸುಲಿನ್ ಅಧಿಕ ಪ್ರಮಾಣದಲ್ಲಿ ಇದ್ದರೂ, ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸದಿದ್ದರೆ ಅದಕ್ಕೆ ಎರಡನೇ ವಿಧದ ಸಕ್ಕರೆ ರೋಗವೆಂದು ಕರೆಯುತ್ತಾರೆ.

**ಏನು ಮಾಡಬೇಕು?**

1. ವೈದ್ಯರ ಬಳಿಯಲ್ಲಿ ನಿಮ್ಮ ದೇಹದ ಸಕ್ಕರೆಯ ಪ್ರಮಾಣವನ್ನು ಗ್ಲೂಕೋ ಮೀಟರ್ ಎಂಬ ಸಾಧನದಿಂದ ಪರೀಕ್ಷಿಸಿಕೊಳ್ಳಿ.
2. ನಿಮ್ಮ ಬೆರಳಿನ ಉಗುರನ್ನು ಜಿಗುಟಬೇಕು. ಎರಡು ಸೆಕೆಂಡುಗಳೊಳಗೆ ಅದು ಕೆಂಪು ಬಣ್ಣಕ್ಕೆ ತಿರುಗುತ್ತದೆಯೇ ಪರೀಕ್ಷಿಸಿ ನೋಡಿ.
3. ಬೆಳಿಗ್ಗೆ, ಮಧ್ಯಾಹ್ನ ಹಾಗೂ ಸಾಯಂಕಾಲ ಮೂವತ್ತು ನಿಮಿಷಗಳಂತೆ ಒಟ್ಟು 90 ನಿಮಿಷ ವೇಗವಾಗಿ ನಡೆಯಿರಿ. ಊಟಕ್ಕೆ ಮೊದಲು ಮಾಡುವ ವ್ಯಾಯಾಮವು ಜೀವಕೋಶಗಳಿಗೆ ರಕ್ತಸಕ್ಕರೆ ಪ್ರವೇಶಿಸುವಂತೆ ಮಾಡಿ ಇನ್ಸುಲಿನ್‌ನಂತೆ ಕೆಲಸ ಮಾಡುತ್ತದೆ.
4. ರಾತ್ರಿ ಊಟಕ್ಕೆ ಹಣ್ಣುಗಳನ್ನು ಮಾತ್ರ ತಿನ್ನಿ. ಜೀವಕೋಶಕ್ಕೆ ಪ್ರವೇಶಿಸಲು ಹಣ್ಣಿನಲ್ಲಿರುವ ಸಕ್ಕರೆಗೆ ಇನ್ಸುಲಿನ್ ಅಗತ್ಯವಿಲ್ಲ.
5. ಕೊಬ್ಬಿನಾಂಶ ಮತ್ತು ಸಕ್ಕರೆ ಸೇರಿಸಿರುವ ಆಹಾರ ಪದಾರ್ಥ ತಿನ್ನಬಾರದು.
6. ತೂಕ ಇರಿಸಿಕೊಳ್ಳಬೇಕು.

## ಹೃದಯಾಘಾತ

**ಹೃದಯಾಘಾತವೆಂದರೇನು?**

ಇದಕ್ಕಿದ್ದಂತೆ ಶುದ್ಧ ರಕ್ತನಾಳದಲ್ಲಿ ರಕ್ತ ಹೆಪ್ಪುಗಟ್ಟಿ ಅದರ ಪರಿಣಾಮವಾಗಿ ಹೃದಯದ ಒಂದು ಸ್ನಾಯುಭಾಗ ಸಾಯುವುದು.

**ಗುರುತು ಹಚ್ಚುವುದು ಹೇಗೆ?**

ಹೃದಯಾಘಾತ ಆಗುವುದಕ್ಕೆ ಮೊದಲು ರೋಗಿಗೆ ವಾಕರಿಕೆ, ಎದೆ ಮತ್ತು ಎಡಭಾಗದ ತೋಳಿನಲ್ಲಿ ನೋವುಂಟಾಗುವುದು. ಅಲ್ಲದೆ ಉಸಿರಾಟದ ತೊಂದರೆ

ಆಗುವುದು.

**ಕಾರಣವೇನು?**

ಹೃದಯಕ್ಕೆ ಸಾಕಷ್ಟು ಪ್ರಮಾಣದಲ್ಲಿ ಪ್ರಾಣವಾಯು ಅಂದರೆ ಆಮ್ಲಜನಕದ ಸರಬರಾಜಿನಲ್ಲಿ ಕೊರತೆ ಉಂಟಾಗುವುದೇ ಹೃದಯಾಘಾತಕ್ಕೆ ಮುಖ್ಯಕಾರಣ ರಕ್ತನಾಳದಲ್ಲಿ ರಕ್ತಹೆಪ್ಪುಗಟ್ಟುವಾಗ ಅಥವಾ ಕಿರೀಟಕಧಮನಿಯು ಸಂಕುಚಿತಗೊಂಡು ಹೃದಯದ ಸ್ನಾಯುವಿಗೆ ರಕ್ತ ಹರಿಯುವಿಕೆಯು ಕಡಿಮೆ-ಯಾದಾಗ ಹೃದಯಾಘಾತವಾಗುತ್ತದೆ.

**ಏನು ಮಾಡಬೇಕು?**

1. ತಕ್ಷಣವೇ 500 ಮೀ. ಗ್ರಾಂ. ಆಸ್ಪಿರಿನ್ ಗುಳಿಗೆ ತೆಗೆದುಕೊಳ್ಳಬೇಕು.
2. ತಕ್ಷಣವೇ ರೋಗಿಯನ್ನು ಆಸ್ಪತ್ರೆಗೆ ಕರೆದೊಯ್ಯಬೇಕು. ಹತ್ತಿರದಲ್ಲಿ ವೈದ್ಯರಿಲ್ಲದಿದ್ದಲ್ಲಿ ಉಗುರು ಬೆಚ್ಚಗಿನ ನೀರಿನಲ್ಲಿ ಮಲಗಿಸಬೇಕು.